ಉದಯವಾಣಿ 17-6-2012
UDAYAVANI - MANIPAL

# ಗ್ರಾಮಸಭೆ ಇನ್ನು ವರ್ಷಕ್ಕೆ ಎರಡಲ್ಲ; ನಾಲ್ಕು ಬಾರಿ
# 'ಹಳ್ಳಿ ವಿಧಾನಸಭೆ' ಪರಿಣಾಮಕಾರಿಗೊಳಿಸುವ ಯತ್ನ ಸಫಲವಾದೀತೆ?

■ ಸಂತೋಷ್ ಬೊಳ್ಳೆಟ್ಟು

ಉಡುಪಿ: ಅಧಿಕಾರ ವಿಕೇಂದ್ರೀಕರಣದ ನೆಲೆಯಲ್ಲಿ ಅನುಷ್ಠಾನಕ್ಕೆ ಬಂದಿರುವ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ತಳಮಟ್ಟದ ಮತ್ತು ಜನರ ನಿಕಟ ಸಂಪರ್ಕದ ಆಡಳಿತ ವ್ಯವಸ್ಥೆಯಾದ ಗ್ರಾಮ ಪಂಚಾಯತ್‌ನ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸುವುದು ಗ್ರಾಮಸಭೆ. ಗ್ರಾಮಸ್ಥರ ಅಭಿಪ್ರಾಯ - ಚರ್ಚೆಯ ವೇದಿಕೆಯಾಗಿರುವ ಗ್ರಾಮಸಭೆ ಇದುವರೆಗೆ ವರ್ಷಕ್ಕೆ ಎರಡು ಬಾರಿ ನಡೆಯುತ್ತಿದ್ದರೆ ಇನ್ನು ಮುಂದೆ ವರ್ಷಕ್ಕೆ ನಾಲ್ಕು ಬಾರಿ ನಡೆಯಬೇಕಿದೆ.

ಗ್ರಾಮಸಭೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಡೆಸುವಂತಾಗಲು ಮೂರು ತಿಂಗಳಿಗೊಮ್ಮೆ ಸಭೆ ನಡೆಸುವ ಕುರಿತಾಗಿ ಸುತ್ತೋಲೆ ಹೊರಡಿಸಿದೆ. 'ಹಳ್ಳಿಯ ವಿಧಾನಸಭೆ' ಎಂದೇ ಕರೆಯಲ್ಪಡುವ ಗ್ರಾಮಸಭೆಗಳು ವರ್ಷಕ್ಕೆ ನಾಲ್ಕು ಬಾರಿ ನಡೆದರೆ ಮುಂದೆ ಪಂಚಾಯತ್ ಕಾರ್ಯನಿರ್ವಹಣೆ ಹೇಗಿರಬಹುದು ಎಂಬ ಸಹಜ ಕುತೂಹಲ ಮೂಡಿದೆ.

**ಮೊದಲ ತ್ರೈಮಾಸಿಕ ಗ್ರಾಮಸಭೆಯಲ್ಲಿ...**

★ ಹಿಂದಿನ ವರ್ಷದ ಪ್ರಗತಿಯ ಪರಿಶೀಲನೆ, ಪುನರವಲೋಕನ ★ ವಾರ್ಷಿಕ ಯೋಜನೆಗೆ ಅನುಮೋದನೆ ★ ಫಲಾನುಭವಿಗಳ ಪಟ್ಟಿಯನ್ನು ಗುರಿಗಳಿಗನುಗುಣವಾಗಿ ಅಂತಿಮಗೊಳಿಸುವುದು. ★ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಎನ್‌ಆರ್‌ಇಜಿ)ಯ ಕಾಮಗಾರಿಗಳ ಪರಿಶೀಲನೆ ★ ಕುಡಿಯುವ ನೀರಿನ ಸೌಲಭ್ಯ, ಗ್ರಾಮ ನೈರ್ಮಲ್ಯಕ್ಕೆ ಸಂಬಂಧಿಸಿದ ವಿಷಯಗಳು ★ ಗ್ರಾ.ಪಂ. ತೀರ್ಮಾನಿಸುವ ವಿಷಯಗಳು

**ಎರಡನೇ ಗ್ರಾಮಸಭೆಯಲ್ಲಿ...**

★ ವರ್ಷದ ಮೊದಲ ಮೂರು ತಿಂಗಳಲ್ಲಿ ಕಾರ್ಯನಿರ್ವಹಣೆ ಕುರಿತು ಪುನರವಲೋಕನ ★ ಮಹಿಳೆಯರು ಮತ್ತು ಮಕ್ಕಳಿಗೆ ಸಂಬಂಧಿಸಿದಂತೆ ಪೌಷ್ಟಿಕ ಆಹಾರದ ಸವಾಲುಗಳು ಮತ್ತು ಇದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚೆ ★ ಕುಡಿಯುವ ನೀರಿನ ಸೌಲಭ್ಯ, ಗ್ರಾಮ ನೈರ್ಮಲ್ಯಕ್ಕೆ ಸಂಬಂಧಿಸಿದ ವಿಷಯಗಳು. ★ ಗ್ರಾಮ ಪಂಚಾಯತ್ ತೀರ್ಮಾನಿಸುವ ಇತರ ವಿಷಯಗಳು.

**ಮೂರನೇ ಗ್ರಾಮಸಭೆಯಲ್ಲಿ...**

★ ಪಂಚಾಯತ್ ಜಮಾಬಂದಿ ವರದಿ ಬಗ್ಗೆ ಪರ್ಯಾಲೋಚಿಸುವುದು. ★ ಕಾಮಗಾರಿಗಳ ಮೇಲ್ವಿಚಾರಣೆಯೂ ಸೇರಿದಂತೆ ಗ್ರಾ.ಪಂ. ಅನುಮೋದಿತ ವಾರ್ಷಿಕ ಯೋಜನೆಯ ಅರೆ ವಾರ್ಷಿಕ ಪುನರವಲೋಕನ ★ ಮಕ್ಕಳ ಅಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚೆ ★ ತಗಾದೆ, ವಸೂಲಿ ಮತ್ತು ಬಾಕಿಯ ಪುನರವಲೋಕನ ★ ಕುಡಿಯುವ ನೀರಿನ ಸೌಲಭ್ಯ, ಗ್ರಾಮ ನೈರ್ಮಲ್ಯಕ್ಕೆ ಸಂಬಂಧಿಸಿದ ವಿಷಯಗಳು ★ ಗ್ರಾಮ ಪಂಚಾಯತ್ ತೀರ್ಮಾನಿಸುವ ಇತರೆ ವಿಷಯಗಳು

**ನಾಲ್ಕನೇ ತ್ರೈಮಾಸಿಕ ಸಭೆಯಲ್ಲಿ...**

★ ಪಂಚಾಯತ್ ರಾಜ್ ಸಂಸ್ಥೆಯ ಮುಂದಿನ ಆಯವ್ಯಯ ವರ್ಷದ ಬಜೆಟ್ ಬಗ್ಗೆ ಚರ್ಚೆ ಹಾಗೂ ತಯಾರಿಕೆ ★ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ಲೆಕ್ಕ ತಪಾಸಣೆ ★ ಹಿಂದಿನ ವರ್ಷದ ಆಡಿಟ್ ವರದಿಗೆ ಸಂಬಂಧಿಸಿದಂತೆ ಚರ್ಚೆ ★ ಪಂಚಾಯತ್‌ನ ಮುಂದಿನ ವರ್ಷದ ಯೋಜನೆಯ ಅಭಿವೃದ್ಧಿಗಾಗಿ ಪ್ರಾರಂಭಿಕ ಮಾತುಕತೆ ಮತ್ತು ಸಿದ್ಧತೆ ಕಾರ್ಯಗಳು ★ ಫಲಾನುಭವಿಗಳ ಆಯ್ಕೆಯ ಪ್ರಕ್ರಿಯೆ ಆರಂಭಿಸುವುದು ★ ಹೊಸ ತೆರಿಗೆಗಳು, ಶುಲ್ಕಗಳೇನಾದರೂ ಇದ್ದರೆ ಅವುಗಳ ಪರಿಷ್ಕರಣೆ ಮತ್ತು ಪುನರವಲೋಕನ ★ ಕುಡಿಯುವ ನೀರಿನ ಸೌಲಭ್ಯ, ಗ್ರಾಮ ನೈರ್ಮಲ್ಯಕ್ಕೆ ಸಂಬಂಧಿಸಿದ ವಿಷಯಗಳು ★ ಗ್ರಾ.ಪಂ. ತೀರ್ಮಾನಿಸುವ ಇತರ ವಿಷಯಗಳು.

ಪ್ರಸ್ತುತ ಕೆಲವೊಂದು ಗ್ರಾಮಪಂಚಾಯತ್‌ಗಳ ಗ್ರಾಮ ಸಭೆಗಳು ಪರಿಣಾಮಕಾರಿಯಾಗಿ, ಉತ್ತಮ ರೀತಿಯಲ್ಲಿ ಸಾಗುತ್ತಿದ್ದರೆ ಇನ್ನು ಕೆಲವೆಡೆ 'ಗ್ರಾಮ ರಾಜಕೀಯ'ದ ವೇದಿಕೆಯಾಗಿ ಗ್ರಾಮಸಭೆ ಹೊರಹೊಮ್ಮುತ್ತಿದೆ. ಈಗ ನಡೆಯುತ್ತಿರುವ ಎರಡು ಗ್ರಾಮಸಭೆಗಳಲ್ಲಿಯೇ ಗ್ರಾಮಸ್ಥರ ಪಾಲ್ಗೊಳ್ಳುವಿಕೆ ಕಡಿಮೆ. ಇನ್ನು ನಾಲ್ಕು ಗ್ರಾಮಸಭೆಯಾದರೆ ಎಷ್ಟು ಮಂದಿ ಪಾಲ್ಗೊಂಡಾರು? ಎಂಬ ಪ್ರಶ್ನೆಯೂ ಎದ್ದಿದೆ. ಸಕಾರಾತ್ಮಕವಾಗಿ ಯೋಚಿಸುವುದಾದರೆ ಗ್ರಾಮಸಭೆಗಳು ಮತ್ತಷ್ಟು ಪರಿಣಾಮಕಾರಿಯಾಗಿ, ನಿಜವಾದ ಆಡಳಿತ ವಿಕೇಂದ್ರೀಕರಣ ಅನುಷ್ಠಾನಕ್ಕೆ ಗ್ರಾಮಸಭೆಗಳ ಸಂಖ್ಯೆಯ ಹೆಚ್ಚಳ ಉತ್ತಮ ಕೊಡುಗೆಯನ್ನು ನೀಡುವ ಸಾಧ್ಯತೆಯೂ ಇದೆ.

## ದಿನಾಂಕವೂ ನಿಗದಿ!

**ಯಾವ ದಿನಾಂಕದಂದು ಗ್ರಾಮಸಭೆ ನಡೆಸಬೇಕೆಂಬುದನ್ನು ಕೂಡ ತಿಳಿಸಲಾಗಿದೆ. ಮೊದಲ ಗ್ರಾಮಸಭೆ ಮೇ 1, ಎರಡನೇ ಗ್ರಾಮ ಸಭೆ ಆಗಸ್ಟ್ 15, ಮೂರನೇ ಗ್ರಾಮ ಸಭೆ ಅಕ್ಟೋಬರ್ 2 ಅಥವಾ ನವೆಂಬರ್ 14, ನಾಲ್ಕನೇ ಗ್ರಾಮಸಭೆ ಜ.26ರಂದು ನಡೆಯಬೇಕು. ಇಲ್ಲಿರುವುದು ಎಲ್ಲವೂ ಸರಕಾರಿ ರಜಾದಿನಗಳೇ. ಮಾತ್ರವಲ್ಲದೆ ರಾಷ್ಟ್ರೀಯ ಪ್ರಾಮುಖ್ಯ ದಿನಗಳು. ಈ ದಿನಗಳನ್ನು ಆಯ್ಕೆ ಮಾಡಿ ಹೆಚ್ಚು ಹೆಚ್ಚು ಗ್ರಾಮಸ್ಥರನ್ನು ಸೇರಿಸುವ ಉದ್ದೇಶವೂ ಇದರಲ್ಲಿರುವಂತಿದೆ.**

## ಹಿಂದೆಯೂ ಒಮ್ಮೆ ಆದೇಶವಾಗಿತ್ತು

ಈಗ ಗ್ರಾ.ಪಂ.ಗಳು ವರ್ಷಕ್ಕೆ ಎರಡು ಬಾರಿ ಕಡ್ಡಾಯವಾಗಿ ಸಭೆ ಸೇರಬೇಕೆಂದಿದೆ. ಇದು ಬಹುತೇಕ ಎಲ್ಲಾ ಗ್ರಾ.ಪಂ.ಗಳಲ್ಲೂ ನಡೆದುಕೊಂಡು ಬರುತ್ತಿದೆ. ಎನ್‌ಆರ್‌ಇಜಿ ಮತ್ತು ಜಮಾಬಂದಿಗೆ ಇನ್ನೊಮ್ಮೆ ಸಭೆ ಸೇರುವುದಿರುತ್ತದೆ. ಆದರೆ ನಾಲ್ಕು ಬಾರಿ ಗ್ರಾಮಸಭೆ ನಡೆಸಬೇಕೆಂಬ ಆದೇಶ ಸಮಂಜಸವಲ್ಲ, ಅದನ್ನು ಜಾರಿಗೊಳಿಸುವುದು ಕೂಡ ಅಷ್ಟು ಸುಲಭ ಸಾಧ್ಯವಲ್ಲ. ಈ ಹಿಂದೆಯೂ ಒಮ್ಮೆ ಇದೇ ರೀತಿಯ ಆದೇಶ ಹೊರಬಿದ್ದಿತ್ತು. ಆದರೆ ಅನಂತರ ವಾಪಸು ಪಡೆಯಲಾಗಿತ್ತು ಎನ್ನುತ್ತಾರೆ ಮರವಂತೆ ಗ್ರಾ.ಪಂ. ಅಧ್ಯಕ್ಷ ಜನಾರ್ದನ ಮರವಂತೆ ಅವರು.

## ಆಕ್ಷೇಪ ಸಲ್ಲಿಕೆ

ಗ್ರಾಮಸಭೆಗಳನ್ನು ವರ್ಷಕ್ಕೆ ಇಂತಿಷ್ಟು ಮಾಡಬೇಕೆಂಬ ನಿಯಮವಿರಲಿ. ಆದರೆ ದಿನಾಂಕ,ವಿಷಯ ನಿಗದಿಪಡಿಸುವುದು ಸರಿಯಲ್ಲ. ಈ ಬಗ್ಗೆ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ವತಿಯಿಂದ ಆಕ್ಷೇಪಣೆ ಸಲ್ಲಿಸಿದ್ದೇವೆ.

– ದಾಮೋದರ ಆಚಾರ್ಯ, ಹಕ್ಕೊತ್ತಾಯ ಆಂದೋಲನ ಸಂಚಾಲಕ

## ಪಾರದರ್ಶಕತೆ, ಬದ್ಧತೆಯ ಸಮ್ಮಿಲನ

ಗ್ರಾಮಸಭೆಗಳ ಬಗ್ಗೆ ಜನರಿಗೆ ವಿಶ್ವಾಸ ಮೂಡಿಸಲು ಅನುವಾಗುವಂತೆ ಎಲ್ಲಾ ಯೋಜನೆಗಳ ವಿಷಯಗಳ ಆಯ್ಕೆ ಮತ್ತು ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯು ಪಾರದರ್ಶಕತೆ ಮತ್ತು ಬದ್ಧತೆಯ ಸಮ್ಮಿಲನ ಇರಬೇಕು. ಪ್ರತಿಯೊಂದು ಗ್ರಾ.ಪಂ.ಗಳಲ್ಲಿ ನಡೆಯುವ ಗ್ರಾಮಸಭೆಗಳನ್ನು ದಾಖಲೀಕರಿಸುವ ದೃಷ್ಟಿಯಿಂದ ಹಾಗೂ ಸಾರ್ವಜನಿಕರಿಗೆ ಅವಶ್ಯವಿದ್ದಾಗ ಮಾಹಿತಿ ನೀಡುವ ದೃಷ್ಟಿಯಿಂದ ಗ್ರಾ.ಪಂ.ಗಳ ಕಾರ್ಯಕಲಾಪಗಳನ್ನು ಕಡ್ಡಾಯವಾಗಿ ವೀಡಿಯೋ ಚಿತ್ರೀಕರಣ ಮಾಡುವ ಬಗ್ಗೆಯೂ ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದೆ (ಹಲವು ಗ್ರಾ.ಪಂ.ಗಳಲ್ಲಿ ಈಗಾಗಲೇ ವೀಡಿಯೋ ಚಿತ್ರೀಕರಣ ನಡೆಯುತ್ತಿದೆ). ಪ್ರತಿ ಗ್ರಾಮ ಸಭೆಯಲ್ಲಿಯೂ ಚರ್ಚಿಸಬೇಕಾದ ವಿಷಯಗಳ ಬಗ್ಗೆ ನಿರ್ದಿಷ್ಟವಾಗಿ ತಿಳಿಸಲಾಗಿದೆಯಾದರೂ ಪ್ರತಿಯೊಂದು ಗ್ರಾಮಸಭೆಗಳಲ್ಲೂ ಗ್ರಾ.ಪಂ. ತೀರ್ಮಾನಿಸುವ ಇತರೆ ವಿಷಯಗಳ ಚರ್ಚೆಗಳಿಗೂ ಅವಕಾಶ ನೀಡಲಾಗಿದೆ.